ಸತ್ಯ.” ಈ ಎರಡು ಸಾಲುಗಳೇ ರಷೀದನ ವ್ಯಕ್ತಿತ್ವದ ಪರಿಚಯವನ್ನು ಸಶಕ್ತವಾಗಿ ಕಟ್ಟಿಕೊಡುತ್ತವೆ. ಸಲೀನ ಟೀಚರ್ ಒತ್ತಾಸೆಯಿಂದ ಮತ್ತು ಕರೀಂ ಖಾನರ ಪ್ರೋತ್ಸಾಹದಿಂದ ರಷೀದ ಮತ್ತು ಅವನ ತಂಗಿ ಸಲ್ಮಾ ಇಬ್ಬರೂ 'ಕಾಫಿರರು' ನಡೆಸುವ ಒಂದು ಶಾಲೆಯನ್ನು ಸೇರಿ ಸ್ವಧರ್ಮೀಯರ ದೃಷ್ಟಿಯಲ್ಲಿ ಕಾಫಿರರಾಗಿ ಬಿಡುತ್ತಾರೆ. ಅವರೆಲ್ಲರಿಗಿಂತ ಜಮಾತಿನ ಅಧ್ಯಕ್ಷರಾದ ರಹೀಂ ಖಾನರಿಗೆ ಸಲ್ಮಾ ಶಾಲೆಗೆ ಹೋಗುತ್ತಾಳೆ ಎಂಬುದೇ ಕೋಪ ತರಿಸುವ ವಿಷಯ. ಆದರೆ, ರಷೀದ ಅವರ ಮಾತಿಗೆ ಸೊಪ್ಪು ಹಾಕುವವನಲ್ಲ. ತಾರ್ಕಿಕ ಮಾತುಗಳ ಮೂಲಕವೇ ತನ್ನ ನಿಲುವು ಹೌದೆನ್ನಿಸುವಂತೆ ಮಾಡುವವನು. ಕಾಫಿರರು ಎಂಬ ಶಬ್ದದ ಬಳಕೆಗೆ ನಿರ್ದಿಷ್ಟ ಮಾನದಂಡಗಳಿಲ್ಲದ ತೆಳು ಎಳೆಯನ್ನೇ ಹಿಡಿದು ತರ್ಕಬದ್ಧವಾಗಿ ವಾದ ಮುಂದಿಡುವ ಜಾಣ ನಮ್ಮ ರಷೀದ. ಭಾಷೆಯ ವಿಚಾರ ಬಂದಾಗ ಕುರಾನ್ ಇರುವುದು ಅರೇಬಿಕ್‌ನಲ್ಲಿ. ಹಾಗಾದರೆ ಅರೇಬಿಕ್ ಬಾರದ ಮುತ್ತುಪ್ಪಾಡಿಯ ಜನ ಕಾಫಿರರೋ? ಅಲ್ಲ ಅಂತಾದರೆ ಮಲಯಾಳಂ ಬಾರದ ಆದರೆ ಅರೇಬಿಕ್ ಬರುವ ಧರ್ಮಗುರುಗಳು ಕಾಫಿರರಾಗಬೇಕು ಎಂಬ ವಾದ ಮಂಡಿಸಿ ಹಗುರಕ್ಕೆ ಬೇರೆಯವರ ಬಾಯಿ ಮುಚ್ಚಿಸಿ ಬಿಡುವ ಚತುರನೂ ಹೌದು. ಆ ಮೂಲಕ ಸಲ್ಮಾಳ ಓದನ್ನು ಸಮರ್ಥಿಸಿಕೊಳ್ಳುತ್ತಾನೆ.

ಹಾಗಾಗಿ ರಷೀದನನ್ನು ಕಂಡರೆ ರಹೀಂ ಖಾನರಿಗೆ ಇನ್ನಷ್ಟು ಸಿಟ್ಟು. ಬಗ್ಗಿದವನಿಗೇ ಎರಡು ಗುದ್ದು ಜಾಸ್ತಿ ಎಂಬಂತೆ ಬಡವರಿಗೇ ಸಮಾಜದ, ಧರ್ಮದ ಕಟ್ಟಳೆಗಳು ಜಾಸ್ತಿ. ರಷೀದ ಇಂತಹ ಸಾಮಾಜಿಕ ವ್ಯವಸ್ಥೆಯ ಬಲಿಪಶು. ತಂಗಿಗೆ ಸಿನಿಮಾ ತೋರಿಸಿದ್ದಕ್ಕೆ, ಆಕೆ ಕೇರಿಗೊಂದೇ ಇರುವ ಬಾವಿಯಲ್ಲಿ ನೀರು ಸೇದುವ ಹಕ್ಕನ್ನು ಕಳೆದುಕೊಳ್ಳುತ್ತಾಳೆ. ಹುಡುಗರು ಸಿನಿಮಾ ನೋಡಬಹುದಾದರೆ ಹುಡುಗಿಯರು ಏಕೆ ನೋಡಬಾರದು ಎಂಬ ಪ್ರಶ್ನೆಯನ್ನು ಗಂಟಲಲ್ಲೇ ಇಟ್ಟುಕೊಂಡು ನುಂಗಿಬಿಡುವ ಅನಿವಾರ್ಯತೆ ರಷೀದನನದ್ದು. ಕಾರಣ ಕಾಲೇಜು, ಕೆಲಸ, ಓದಿನ ಮಧ್ಯೆ ದೂರದ ಸರಕಾರಿ ಬಾವಿಯಿಂದ ನೀರು ತರಲು ಅವನಿಗೆ ಪುರುಸೊತ್ತಿಲ್ಲ.

ತಾಯಿ ಆಕಸ್ಮಿಕವಾಗಿ ಮರಣ ಹೊಂದಿದಾಗ ರಷೀದ ಮತ್ತು ಸಲ್ಮಾ ಅನಾಥರಾಗುತ್ತಾರೆ. ಇವರು ಶಾಲೆಗೆ ಹೋದರೆ, ಅಕ್ಷರ ಕಲಿತರೆ ತಲೆಗೊಂದು ಮಾತಾಡುವ ಜನರು ಮಕ್ಕಳ ಜವಾಬ್ದಾರಿಯ ವಿಷಯ ಬಂದಾಗ ಬಾಯಿಮುಚ್ಚಿಕೊಳ್ಳುತ್ತಾರೆ. ಕಾಲೇಜು ಬಿಟ್ಟು, ಬೀಡಿ ಕಟ್ಟಿ ರಷೀದ ತಂಗಿಯನ್ನು ಸಾಕಲಿ ಎಂಬ ಬಿಟ್ಟಿ ಸಲಹೆಗಳೇ ಬರುತ್ತವೆಯೇ ಹೊರತು ಸಹಾಯ ಮಾಡುವವರು ಯಾರೂ ಇಲ್ಲ. ದೊಡ್ಡ ಮನೆಯಲ್ಲಿ ಒಂಟಿಯಾಗಿರುವ ಸಲೀನ ಟೀಚರು ಮಕ್ಕಳನ್ನು ತಮ್ಮ ಮನೆಗೆ ಕರೆದುಕೊಂಡು ಹೋದಾಗ ಊರಿನಲ್ಲಿ ಕೋಲಾಹಲವೇ ನಡೆದುಹೋಗುತ್ತದೆ.

ಅಷ್ಟರವರೆಗೆ ತಮ್ಮದೇ ಧರ್ಮದ ಹುಳುಕುಗಳನ್ನು ವಿರೋಧಿಸುತ್ತ, ಮೂಲಭೂತವಾದಿಯಾದ ರಹೀಂ ಖಾನರ ಕೆಂಗಣ್ಣಿಗೆ ಗುರಿಯಾಗಿದ್ದ ರಶೀದ ಕ್ರಿಶ್ಚಿಯನ್ನರ ಮನೆಗೆ ಉಳಿಯಲು ಹೋದ ತಕ್ಷಣ ತನ್ನ ಧರ್ಮವನ್ನು ಕಾಪಾಡಿಕೊಳ್ಳಬೇಕಾದ ಜವಾಬ್ದಾರಿಯನ್ನು ತನಗೇ ಗೊತ್ತಿಲ್ಲದಂತೆ ಹೊತ್ತುಕೊಳ್ಳುತ್ತಾ ಹೋಗುತ್ತಾನೆ. ಮತ್ತು ಅದು ಸರಿಯೋ ತಪ್ಪೋ ಎಂಬ ಗೊಂದಲ ಅವನಲ್ಲೇ ಇರುವುದರಿಂದ ಅದನ್ನು ಸಮಾಜದ ಕಣ್ಣಿನಿಂದ ಮುಚ್ಚಿಡುವ ಪ್ರಯತ್ನವನ್ನೂ ಮಾಡುತ್ತಾನೆ. ಟೀಚರ್ ಮನೆಯಲ್ಲಿ ಎಂದೂ ನಮಾಜು ಮಾಡದವನು ಇದ್ದಕ್ಕಿದ್ದಂತೆ ರಮ್ಜಾನಿನ ಉಪವಾಸ ಶುರು ಮಾಡುತ್ತಾನೆ. ಬೆಳಗಿನ ಸೆಹರ್ ತಪ್ಪಿದ ದಿನವೂ ರಮ್ಜಾನಿನ ಉಪವಾಸವನ್ನು ಹಟ ತೊಟ್ಟು ಹಿಡಿದು ಸಮಸ್ಯೆಗೊಳಗಾಗುತ್ತಾನೆ. ಜಗತ್ತಿನೆದುರು ಅವಮಾನಕ್ಕೊಳಗಾದೆ ಎಂದು ತಾನೇ ಅಂದುಕೊಳ್ಳುತ್ತಾನೆ. ಇಂತಹ ರಷೀದ ಎಲ್ಲರಲ್ಲೂ ಇದ್ದಾನೆ ಎಂದನಿಸುತ್ತದೆ. ಅವನ ದ್ವಂದ್ವಗಳು ಎಲ್ಲರವೂ ಆಗಿವೆ. ಹಾಗಾಗಿ ರಷೀದನ ಪಾತ್ರ ಸಶಕ್ತವಾಗಿದೆ.

ಕಾದಂಬರಿಯುದ್ದಕ್ಕೂ ಈ ದ್ವಂದ್ವದಲ್ಲಿ ತೊಳಲುವ, ನೋವು ಅನುಭವಿಸುವ ನಾಯಕ ರಷೀದ್. ತಾಯಿ ತೀರಿಕೊಂಡಾಗ ತನ್ನ ಪದವಿ ಮುಗಿಸುವುದೋ ಅಥವಾ ಕೆಲಸಕ್ಕೆ ಹೋಗಿ ತಂಗಿಯನ್ನು ಸಾಕುವುದೋ, ತಂಗಿಯನ್ನು ಓದಿಸಿ ಅವಳ ಭವಿಷ್ಯ ಸುಭದ್ರಗೊಳಿಸುವುದೋ ಅಥವಾ ಜಮಾತಿನವರ ಮಾತಿಗೆ ಕಟ್ಟುಬಿದ್ದು ಅವಳ ಶಾಲೆ ಬಿಡಿಸುವುದೋ ಎಂಬ ದ್ವಂದ್ವಗಳು. ತಂಗಿ ತನಗೊಂದು ಸಮಸ್ಯೆಯೇ ಎಂದು ತನಗೇ ತಾನು ಹತ್ತಾರು ಸಲ ಪ್ರಶ್ನೆ ಕೇಳಿಕೊಳ್ಳುತ್ತಾನೆ. ಇಸ್ಲಾಮಿನ